ಆಶ್ಚರ್ಯವಾಯಿತು. ಭೆಟ್ಟಿಯಾಗದೆ ಇದ್ದದ್ದು ಕೂಡ ಒಳ್ಳೆಯದೆ ಆಯಿತು. ಇಲ್ಲದಿದ್ದರೆ ಒಂದಕ್ಕೆ ಹತ್ತು ಸೇರಿಸಿ ಅದನ್ನು ಶಂಕರಪ್ಪಮಾವನ ಮುಂದೆ ಹೇಳುತ್ತಾರೆ. ನಾಗ್ಯಾ ಬಸ್‌ಸ್ಟ್ಯಾಂಡಿನಲ್ಲಿ ಪರದೇಶಿಯಂತೆ ಕುಳಿತಿದ್ದನೆಂದು ಅವನಿಗೆ ಹೋಗಿ ವರದಿ ಮಾಡಿದರೂ ಮಾಡಬಹುದು. 'ಹಂಗss ಆಗಬೇಕು ಅಂವಗ. ಇನ್ನ ಮ್ಯಾಲ ಆಂವ ಬೀದಿ ಭಿಕಾರಿ ಆಗ್ತಾನ. ನೋಡ್ತಾ ಇರಿ.' ಮಾವ ಅವರ ಮುಂದೆ ತನ್ನ ಪರಾಕ್ರಮವನ್ನು ಕೊಚ್ಚಿಕೊಳ್ಳುತ್ತಾನೆ. ತಾನ್ಯಾಕೆ ಆತನನ್ನು ಇಷ್ಟು ಒಳಗೆ ತುಂಬಿಕೊಂಡು ವಿಹ್ವಲನಾಗುತ್ತಿದ್ದೇನೆ. ನಾಗರಾಜ ತಲೆ ಜಾಡಿಸಿದ. ಯಾವುದಾದರೂ ಬಸ್ ಹತ್ತಿ ಎಲ್ಲಿಗಾದರೂ ಹೋಗಿಬಿಡಬೇಕು ಎಂದು ಅನಿಸುತ್ತಿತ್ತು.

